**ಸಾಕ್ಷಿಯು ದಿನಾಂಕಃ 21-12-2024 ರಂದು ವಿಚಾರಣೆಗಾಗಿ ಹಾಜರಾಗಿದ್ದು, ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.**

**ಸಾಕ್ಷಿಯು ತಾನು ತೆರೆದ ನ್ಯಾಯಾಲಯದಲ್ಲಿ ಸಾಕ್ಷ್ಯ ನುಡಿಯಲು ಮುಜುಗರ ಆಗುತ್ತದೆ ಎಂದು ತಿಳಿಸಿದ್ದರಿಂದ ಮತ್ತು ಉಭಯ ಪಕ್ಷಗಾರರಿಗೂ ಇನ್ ಕ್ಯಾಮರಾ ಪ್ರೊಸೆಡಿಂಗ್ಸ್ ನಡೆಸಲು ಯಾವುದೇ ತಕರಾರು ಇಲ್ಲದ್ದರಿಂದ ಪ್ರಕರಣವನ್ನು ಇನ್ ಕ್ಯಾಮರಾ ಪ್ರೊಸೆಡಿಂಗ್ಸ್ ನಲ್ಲಿ ನಡೆಸಲಾಯಿತು.**

**<u>ಪಾಟಿ ಸವಾಲುಃ ಎದುರುದಾರರ ಪರ ಶ್ರೀ ಬಿ.ಪಿ.ಕೆ., ವಕೀಲರಿಂದ</u>**

ನಾನು 7 ನೇ ತರಗತಿಯವರೆಗೆ ಓದಿರುತ್ತೇನೆ. ನನಗೆ ಹಿಂದಿ ಓದಲು ಮತ್ತು ಬರೆಯಲು ಬರುತ್ತದೆ. ಕನ್ನಡ ನನಗೆ ಅರ್ಥವಾಗುತ್ತದೆ. ನಾನು ಮದುವೆಗೂ ಮೊದಲು ಬೆಂಗಳೂರಿನಲ್ಲಿ ವಾಸ ಇದ್ದೆ. ನಾನು ಬೆಂಗಳೂರಿನಲ್ಲಿ ಸುಮಾರು 20 ವರ್ಷಗಳ ಕಾಲ ವಾಸ ಇದ್ದೆ. ನಾನು ಬೆಂಗಳೂರಿನ ಕೆ ಆರ್ ಪುರಂ ನ ವೇಣು ಬಿಲ್ಡಿಂಗ್ ನ ಮನೆ ನಂ. 2 ರಲ್ಲಿ ವಾಸ ಇದ್ದೆ. ಸದರಿ ಮನೆಯಲ್ಲಿ ನಾನು, ನನ್ನ ತಂದೆ, ನನ್ನ ತಾಯಿ ಮತ್ತು ನನ್ನ ಅಣ್ಣ ವಾಸವಿದ್ದೇವು. ನನ್ನ ಅಣ್ಣನ ಹೆಸರು ಜ್ಞಾನಶೇಖರ ದಾಸ. ನಾನು ಈಗಲೂ ಸಹ ಬೆಂಗಳೂರಿನಲ್ಲಿಯೇ ವಾಸ ಇರುತ್ತೇನೆ ಅಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು, ನಾನು ಮದುವೆಯಾಗಿ ಅಲಹಾಬಾದ್ ದಿಂದ ವಾಪಸ್ ಬಂದಾಗಿನಿಂದ ಬೆಂಗಳೂರಿನಲ್ಲಿ ಮೊದಲಿಗೆ ಮತ್ತು ಹಾಲಿ ಹೊಸಪೇಟೆಯಲ್ಲಿಯೇ ಇರುತ್ತೇನೆ ಮತ್ತು ನನ್ನ ಅಣ್ಣನ ಬಳಿ ಇರುತ್ತೇನೆ ಎಂದು ನುಡಿಯುತ್ತಾರೆ. ನನ್ನ ಅಣ್ಣ ಮೊದಲಿನಿಂದಲೂ ಹೊಸಪೇಟೆಯಲ್ಲಿಯೇ ವಾಸ ಇರುತ್ತಾರೆ. ನನ್ನ ಅಣ್ಣನಿಗೆ ಮದುವೆಯಾಗಿರುವುದಿಲ್ಲ. ನಾನು ಹೊಸಪೇಟೆಯಲ್ಲಿ 3 ವರ್ಷಗಳಿಂದ ವಾಸ ಇದ್ದೇನೆ.

ನಾನು ಹೊಸಪೇಟೆಯಲ್ಲಿ ವಾಸ ಇರುವ ಬಗ್ಗೆ ಇಲ್ಲಿಯ ವಿಳಾಸದ ದಾಖಲೆಗಳನ್ನು ಪಡೆದಿಲ್ಲ. ಸಾಕ್ಷಿ ಮುಂದುವರೆದು, ಬೆಂಗಳೂರಿನ ವಿಳಾಸದ ದಾಖಲೆಗಳು ಇರುತ್ತವೆ ಎಂದು ನುಡಿಯುತ್ತಾರೆ. ಹೊಸಪೇಟೆಗೆ ಬಂದ ನಂತರ ದಾಖಲೆಗಳಲ್ಲಿ ಹೊಸಪೇಟೆ ವಿಳಾಸವನ್ನು ನಮೂದಿಸಲಾಗುತ್ತದೆ ಅಂದರೆ ಸರಿಯಲ್ಲ. ಸಾಕ್ಷಿ ನಾನು ಇನ್ನೂ ಆ ರೀತಿ ನಮೂದಿಸಿಲ್ಲ ಎಂದು ನುಡಿಯುತ್ತಾರೆ. ನಾನು ಇಂದಿಗೂ ಸಹ ಬೆಂಗಳೂರಿನಲ್ಲಿಯೇ ವಾಸ ಇರುವುದರಿಂದ ಹೊಸಪೇಟೆಯ ವಿಳಾಸಕ್ಕೆ ಸಂಬಂಧಿಸಿ ಯಾವುದೇ ದಾಖಲೆಯನ್ನು ಪಡೆದಿರುವುದಿಲ್ಲ ಅಂದರೆ ಸರಿಯಲ್ಲ. ನಾನು ಹೊಸಪೇಟೆಯಲ್ಲಿಯೇ ವಾಸ ಇರುತ್ತೇನೆ ಎಂದು ತೋರಿಸಲು ಯಾವುದೇ ದಾಖಲೆಗಳನ್ನು ಮತ್ತು ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಅಂದರೆ ಸರಿ. ಆ ರೀತಿ ದಾಖಲೆಗಳನ್ನು ಹಾಜರುಪಡಿಸಲು ತೊಂದರೆ ಇರುವುದಿಲ್ಲ. ಸಾಕ್ಷಿ ಮುಂದುವರೆದು, ನನ್ನ ದಾಖಲೆಗಳಲ್ಲಿ ಈಗಲೂ ಸಹ ಬೆಂಗಳೂರಿನ ವಿಳಾಸ ನಮೂದಾಗಿದೆ ಎಂದು ನುಡಿಯುತ್ತಾರೆ. ನಾನು ಹೊಸಪೇಟೆಯಲ್ಲಿ ವಾಸವೇ ಇಲ್ಲಾ ಮತ್ತು ಹೊಸಪೇಟೆಯಲ್ಲಿ ವಾಸ ಇರುತ್ತೇನೆ ಎಂದು ಸುಳ್ಳು ಪ್ರತಿಪಾದಿಸಿ ಈ ಪ್ರಕರಣ ದಾಖಲಿಸಿರುತ್ತೇನೆ ಅಂದರೆ ಸರಿಯಲ್ಲ.

**ಎದುರುದಾರರ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗಾಗಿ ಸಮಯ ಕೋರಿದ್ದು, ಮುಂದೂಡಲಾಯಿತು.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೆ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ., ಹೊಸಪೇಟೆ.